**ಓ.ಎಸ್. ನಂ. 107/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 22.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 5.6.2023 ರಂದು ಪ್ರತಿವಾದಿಗೆ ವಕೀಲರ ಮೂಲಕ ನೀಡಿರುವ ನೋಟಿಸಿದ ಕಛೇರಿ ಪ್ರತಿಯನ್ನು ನಿಪಿ2 ಎಂದು, ಅಂಚೆ ರಶೀದಿಯನ್ನು ನಿಪಿ3 ಎಂದು, ಸದರಿ ನೋಟಿಸನ್ನು ಪ್ರತಿವಾದಿಯು ಸ್ವೀಕರಿಸದೆ ವಾಪಸ್ ಬಂದಿದ್ದು ಸದರಿ ಅಂಚೆ ಕವರನ್ನು ನಿಪಿ4 ಎಂದು, ಅದರಲ್ಲಿರುವ ನೋಟಿಸಿನ ಪ್ರತಿಯನ್ನು ನಿಪಿ4 ಎ ಎಂದು, ದಿನಾಂಕ 13.10.2014 ರ ಜಿ.ಪಿ.ಎ ನ ದೃಢೀಕೃತ ನಕಲನ್ನು ನಿಪಿ5 ಎಂದು, ಇ.ಸಿ ಯನ್ನು ನಿಪಿ6 ಎಂದು, ದಾವಆಸ್ತಿಗೆ ಸಂಬಂಧಿಸಿದ ಎರಡು ಪಹಣಿಗಳನ್ನು ನಿಪಿ7 ಮತ್ತು ನಿಪಿ8 ಎಂದು, ಮ್ಯುಟೇಶನ್ ರಿಜಿಸ್ಟರನ್ನು ನಿಪಿ9 ಎಂದು, ಇನ್ನೊಂದು ಇ.ಸಿ ಯನ್ನು ನಿಪಿ10 ಎಂದು, ಇನ್ನೊಂದು ಮ್ಯುಟೇಶನ್ ರಿಜಿಸ್ಟರನ್ನು ನಿಪಿ11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರು ಲಿಖಿತ ಹೇಳಿಕೆ ಸಲ್ಲಿಸದಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.